10.30 ಎ.ಎಂ.

ವರ್ತಿಸಬೇಕಾಗಿರತಕ್ಕಂಥದ್ದು ಸಹಜವಾದುದು. ಇದರಲ್ಲಿ ಅಭಿಪ್ರಾಯ, ವ್ಯತ್ಯಾಸಗಳು ಬರಲಿಕ್ಕೆ ಕಾರಣವೇ ಇಲ್ಲ. ನಾನು ಈ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೂ ಪತ್ರ ಬರೆದು ಈ ವಿಚಾರದ ಬಗ್ಗೆ ಅವರ ಗಮನವನ್ನು ಸೆಳೆಯುತ್ತೇನೆ. ಹಾಗೆಯೇ ಕೇಂದ್ರ ಸರ್ಕಾರದ ಗಮನವನ್ನು ಕೂಡ ಸೆಳೆಯುತ್ತೇನೆ. ಈ ಬಗ್ಗೆ ಹೆಚ್ಚು ಮಾಹಿತಿಗಳನ್ನು ಸಂಗ್ರಹ ಮಾಡುವುದಕ್ಕೆ ಸಾಧ್ಯವಾದರೆ ಆ ಮಾಹಿತಿಗಳನ್ನು ನಾನು ತರಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಗಣ್ಯ ವ್ಯಕ್ತಿಗಳು ಏನು ತೀರಿಕೊಂಡಿದ್ದಾರೆ, ಅವರ ಬಗ್ಗೆ ಸ್ವಲ್ಪ ಮಾತನಾಡುವುದಕ್ಕೆ ನಮಗೆಲ್ಲಾ ಅವಕಾಶ ಕೊಟ್ಟರೆ ಒಳ್ಳೆಯದು. ಅದು ಒಂದು ಸಂಪ್ರದಾಯ ಇಲ್ಲಿ ಇದೆ. ಶ್ರೀ ವೈ.ಎನ್.ಕೆ.ಯವರ ಬಗ್ಗೆ ನಾನು ಮಾತನಾಡುವ ಸಮಯದಲ್ಲಿ ಈ ವಿಷಯ ಪ್ರಸ್ತಾಪ ಮಾಡಬೇಕೆಂದು ಇದ್ದೆ, ಕಳೆದ ಅಧಿವೇಶನದಲ್ಲಿ ಈ ರೀತಿ ಸಂಪ್ರದಾಯ ಇತ್ತು. ಗಣ್ಯರ ಬಗ್ಗೆ ಸಂತಾಪಸೂಚನೆ ಮಾಡುವ ಸಂದರ್ಭದಲ್ಲಿ ಅವರ ಬಗ್ಗೆ ಕೆಲವು ಮಾತುಗಳನ್ನು ಹೇಳುವಂತಹ ಸಂಪ್ರದಾಯ ಇತ್ತು.

ಅಧ್ಯಕ್ಷರು: ಸಾಮಾನ್ಯವಾಗಿ ಹಾಲಿ ಶಾಸಕರಾದರೆ ಹಾಗೆ ಮಾಡುತ್ತೇವೆ.

(2) ಪ್ರಮಾಣ ವಚನ ಸ್ವೀಕಾರ

ಅಧ್ಯಕ್ಷರು: ನೂತನವಾಗಿ ಆಯ್ಕೆಯಾದ ಸದಸ್ಯರು ಪ್ರಮಾಣವಚನ ಸ್ವೀಕರಿಸುವುದು.

ಶ್ರೀ ಎ. ದೊಡ್ಡೇಗೌಡ :(ಹೊಳೆನರಸಿಪುರ)

ಶ್ರೀ ಬಿ.ಆರ್. ನೀಲಕಂಠಪ್ಪ :(ತರೀಕೆರೆ)

(3) ಪ್ರಕಟಣೆ

ಅಧ್ಯಕ್ಷರು: ಈ ವಿಧಾನ ಸಭೆಯ ಮಾನ್ಯ ಸದಸ್ಯರಾದ ರಾಜ ಅಮರೇಶ್ವರ ನಾಯಕ್ ಅವರನ್ನು ವಿಧಾನ ಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕರಾಗಿ ನೇಮಿಸಲಾಗಿದೆ.

ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ದಿನಾಂಕ 26.10.99 ರಂದು ಬರೆದ ಪತ್ರದ ಮೇರೆಗೆ ಭಾರತೀಯ ಜನತಾಪಾರ್ಟಿ ಶಾಸಕಾಂಗ ಪಕ್ಷದ ಶ್ರೀ ಡಿ.ವಿ. ಸದಾನಂದಗೌಡ ಅವರನ್ನು ಶಾಸಕಾಂಗ ಪಕ್ಷದ ಉಪನಾಯಕರು ಹಾಗೂ ಶ್ರೀ ಎ. ನಾರಾಯಣಸ್ವಾಮಿಯವರನ್ನು ಸಚೇತಕರೆಂದು ಮನ್ನಣೆ ನೀಡಲಾಗಿದೆ.

ಜನತಾದಳ (ಸೆಕ್ಯುಲರ್) ಪಕ್ಷದ ಅಧ್ಯಕ್ಷರಾದ ಶ್ರೀ ಸಿದ್ದರಾಮಯ್ಯನವರು ದಿನಾಂಕ 27.10.99 ರಂದು ಬರೆದ ಪತ್ರದ ಮೇಲೆ ಜನತಾದಳ (ಸೆಕ್ಯುಲರ್) ಶಾಸಕಾಂಗ ಪಕ್ಷದ ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕರೆಂದು, ಶ್ರೀ ಸಿ. ಚೆನ್ನಿಗಪ್ಪ ಅವರನ್ನು ಉಪನಾಯಕರೆಂದು ಹಾಗೂ ಸೇಟ್ ಅಸೀಸ್ ಮಸೀದ್ ಎಸ್ ಖಾದ್ರಿ ಅವರನ್ನು ಸಚೇತಕರೆಂದು ಪರಿಗಣಿಸಲಾಗಿದೆ.

ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ